**ಪ್ರಮಾಣೀಕರಿಸಲಾದ ದಿನಾಂಕಃ– 03.02.2026.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ. ಸಿ. ಪಿ. ವಕೀಲರಿಂದಃ–**

ಆರೋಪಿ ಕಾಳು ಮೆಣಸು ದಾಸ್ತಾನು ಮಾರಾಟ ಮಾಡಿ ಜಮಾ ಆದ ದಾಖಲೆ ಕೊಟ್ಟಿಲ್ಲ. ಅದೇ ರೀತಿ ಕಾಫಿಯ ದಾಸ್ತಾನು ಮಾರಾಟ ಮಾಡಿದ ದಾಖಲೆ ಕೂಡ ಕೊಟ್ಟಿರುತ್ತೇನೆ. ನಿ ಪಿ 49 ರಂತೆ ಆರೋಪಿಯು ಕಾಫಿಯನ್ನು ಬೇರೆಯವರಿಗೆ ಮಾರಾಟ ಮಾಡಿ ರೂ. 8,25,000/– ಮತ್ತು ನಿ ಪಿ 48 ರಂತೆ ರೂ. 83,590/– ಹಣ ಪಾವತಿಸಿರುತ್ತಾರೆ. ಈ ಎರಡು ರಶೀದಿಗಳಲ್ಲಿ ಆರೋಪಿಯ ಸಹಿ ಇಲ್ಲ ಎಂದರೆ ಸರಿ. ಈ ಪ್ರಕರಣದ ದಾಖಲಾಗಿ ಪಾಟೀ ಸವಾಲಾದ ನಂತರ ಇವುಗಳನ್ನು ಸೃಷಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ಮಂಡಳಿ ಸೇರಿ ಸುಳ್ಳು ಸಾಕ್ಷ್ಯ ಮತ್ತು ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಿ ಪಿ 47 ರಂತೆ ಮೊತ್ತ ಅಂಕಿಗಳಲ್ಲಿ 10,08,000/– ಇದ್ದು ಪದಗಳಲ್ಲಿ ಅದನ್ನು 10 ಲಕ್ಷ ಎಂದು ಬರೆದಿದ್ದು ಸರಿಯಾದ ಮೊತ್ತ 10 ಲಕ್ಷದ 8 ಸಾವಿರ ಹಣ ಚೆಕ್ ಮೂಲಕ ನಗದೀಕರಣವಾಗಿರುತ್ತದೆ. ಸೃಷ್ಟಿತ ದಾಖಲೆ ಆದ ಕಾರಣಕ್ಕೆ ನಿಪಿ 47 ರಲ್ಲಿ ತಪ್ಪಾಗಿರುತ್ತದೆ ಎಂದರೆ ಸರಿಯಲ್ಲ.

ನಿ ಪಿ 1 ಚೆಕ್ ಅನ್ನು ಆರೋಪಿ ಹೇಳಿದಂತೆ ನಾನು ಬರೆದಿರುತ್ತೇನೆ. ನಿ ಪಿ 1 ಚೆಕ್ ಸಾಲ ಕೊಡುವಾಗ ಭದ್ರತೆಗೆಂದು ಸಹಿ ಮಾಡಿದ ಖಾಲಿ ಚೆಕ್ ಅನ್ನು ಪಡೆದಂತಹ ಚೆಕ್ ಆಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿ ಚೆಕ್ ನಲ್ಲಿರುವ ಮೊತ್ತವನ್ನು ಕೊಡಲು ಬದ್ಧನಲ್ಲ ಎಂದರೆ ಸರಿಯಲ್ಲ. ಆರೋಪಿ ವಿರುದ್ಧ ತೊಂದರೆ ಕೊಡಲು ಸುಳ್ಳು ಪ್ರಕರಣದ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/–

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ